**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಶ್ರೀ ಉದಯಕುಮಾರ ಪಟ್ಟಣ, ಅನುರೇಖಕ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ, ಕಲಬುರಗಿ ಇವರ ಪತ್ನಿಯ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು.

ಓದಲಾಗಿದೆ: 1. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ನಿಕಾನಿ/ಆಕಾ/ಸಿ-1/ವೈ.ವೆ/ಮರುಪಾವತಿ/2021-22/1334, ನಾಂಕ:28.12.2021.

2. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು, ಇವರ ಪತ್ರ ಸಂಖ್ಯೆ: ಆಕುಕ/ಎಸ್. ಎ. ಎಸ್.ಟಿ/ ಎಂ.ಆರ್.ಸಿ /7342/2021-22 ದಿನಾಂಕ:30.08.2021.

* * * * * *

**ಪ್ರಸ್ತಾವನೆ:**

ನಿರ್ದೇಶಕರು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ನಿರ್ದೇಶನಾಲಯ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ (1)ರಲ್ಲಿನ ದಿನಾಂಕ:28.12.2021ರ ಪತ್ರದಲ್ಲಿ ಆಡಳಿತಾಧಿಕಾರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ ಕಲಬುರಗಿ ಕಚೇರಿಯಲ್ಲಿ ಅನುರೇಖಕರು ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಉದಯಕುಮಾರ ಪಟ್ಟಣ, ಇವರ ಪತ್ನಿ ಶ್ರೀಮತಿ ಅಕ್ಕಮಹಾದೇವಿ ಯವರು ಕೋವಿಡ್ -19ರ ಖಾಯಿಲೆಯ ನಿಮಿತ್ತ ದಿನಾಂಕ:06.05.2021 ರಿಂದ 15.05.2021 ವರೆಗೆ ವಾತ್ಸಲ್ಯ ಲೈಫ್ ಕೇರ್ ಆಸ್ಪತ್ರೆ, ಕಲಬುರಗಿ ಇಲ್ಲಿ ಚಿಕಿತ್ಸೆ ಪಡೆಯಲಾಗಿದ್ದು, ಸದರಿ ವೈದ್ಯಕೀಯ ಚಿಕಿತ್ಸೆಗೆ ಭರಿಸಲಾದ ಒಟ್ಟು ರೂ.2.70.000/- ಗಳನ್ನು ಮರುಪಾವತಿಸುವಂತೆ ಕೋರಿದ್ದರ ಮೇರೆಗೆ, ಸದರಿಯವರು ಚಿಕಿತ್ಸೆ ಪಡೆದ ವಾತ್ಸಲ್ಯ ಲೈಫ್ ಕೇರ್ ಕಲಬುರಗಿ ಆಸ್ಪತ್ರೆಯು ಸರ್ಕಾರದಿಂದ ಅಧಿಸೂಚಿತವಲ್ಲದ ಖಾಸಗಿ ಆಸ್ಪತ್ರೆಯಾಗಿರುವುದರಿಂದ ಸದರಿಯವರು ವೈದ್ಯಕೀಯ ಚಿಕಿತ್ಸೆಗಾಗಿ ಮಾಡಿರುವ ವೆಚ್ಚದಲ್ಲಿ ಅರ್ಹತಾ ಮೊತ್ತವಾದ ರೂ95.000/- ಗಳನ್ನು ಮರುಪಾವತಿಸುವ ಕುರಿತು ಸರ್ಕಾರದ ವಿಶೇಷ ಮಂಜೂರಾತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ(2)ರಲ್ಲಿನ ದಿನಾಂಕ:22.07.2021ರ ಪತ್ರದಲ್ಲಿ, ಶ್ರೀ ಉದಯಕುಮಾರ ಪಟ್ಟಣ, ಅನುರೇಖಕರು ಇವರ ಪತ್ನಿಯವರು ಚಿಕಿತ್ಸೆ ಪಡೆದ ವಾತ್ಸಲ್ಯ ಲೈಫ್ ಕೇರ್ ಕಲಬುರಗಿ ಆಸ್ಪತ್ರೆಯು ಖಾಸಗಿ ಆಸ್ಪತ್ರೆಯಾಗಿದ್ದು, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿದ್ದಲ್ಲಿ ಸದರಿಯವರಿಗೆ ರೂ.95.000/- ಗಳ ಅರ್ಹತಾ ಮೊತ್ತ ಪಾವತಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

3. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಶ್ರೀ ಉದಯಕುಮಾರ ಪಟ್ಟಣ, ಅನುರೇಖಕರು ಆಡಳಿತಾಧಿಕಾರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ ಕಲಬುರಗಿ ಇವರ ಪತ್ನಿಯು ಕೋವಿಡ್-19ರ ಖಾಯಿಲೆಯ ನಿಮಿತ್ತ ತುರ್ತು ಸಂದರ್ಭವಿದ್ದ ಕಾರಣ ವಾತ್ಸಲ್ಯ ಲೈಫ್ ಕೇರ್ ಆಸ್ಪತ್ರೆ, ಕಲಬುರಗಿ ಇಲ್ಲಿ ಚಿಕಿತ್ಸೆ ಪಡೆದಿದ್ದು, ಸದರಿಯವರು ಚಿಕಿತ್ಸೆ ಪಡೆದ ಸಂದರ್ಭ ಮತ್ತು ಸನ್ನಿವೇಶಗಳನ್ನು ಪರಿಶೀಲಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮ 31 ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅದೇ ನಿಯಮಗಳ ನಿಯಮ 14 ನ್ನು ಸಡಿಲಿಸಿ, ವೈದ್ಯಕೀಯ ವೆಚ್ಚದ ಅರ್ಹತಾ ಮೊತ್ತ ರೂ.95.000/- ಗಳನ್ನು ಮರುಪಾವತಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 08 ಐಪಿಜಡ್ 2022**
**ಬೆಂಗಳೂರು, ದಿನಾಂಕ:22.04.2022**

ಶ್ರೀ ಉದಯಕುಮಾರ ಪಟ್ಟಣ, ಅನುರೇಖಕರು ಕಾರ್ಯಪಾಲಕ ಅಭಿಯಂತರರ ಕಛೇರಿ, ಕಾಡಾ ವಿಭಾಗ, ಕಲಬುರಗಿ ಇವರ ಪತ್ನಿಯವರು ಕೋವಿಡ್-19ರ ಖಾಯಿಲೆಗೆ ಖಾಸಗಿ ಆಸ್ಪತ್ರೆಯಲ್ಲಿ ಪಡೆದ ಚಿಕಿತ್ಸೆಗಾಗಿ ತಗಲಿದ ವೈದ್ಯಕೀಯ ವೆಚ್ಚವನ್ನು ಇವರು ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರೆ ರೂ.95.000/- (ತೊಂಬತ್ತೈದು ಸಾವಿರ ರೂಪಾಯಿಗಳು ಮಾತ್ರ)ಗಳ ಅರ್ಹತಾ ಮೊತ್ತವನ್ನು ಮರು ಪಾವತಿಗೆ ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಟ್ರಸ್ಟ್, ಬೆಂಗಳೂರುರವರು ಶಿಫಾರಸ್ಸು ಮಾಡಿದ್ದು ಅದರನ್ವಯ ರೂ.95.000/- (ತೊಂಬತ್ತೈದು ಸಾವಿರ ರೂಪಾಯಿಗಳು ಮಾತ್ರ) ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ಕರ್ನಾಟಕ ಸರ್ಕಾರಿ ನೌಕರರ ವೈದ್ಯಕೀಯ ವೆಚ್ಚ ಮರುಪಾವತಿ ನಿಯಮಗಳು 1963 ರ ನಿಯಮ 31 ರಿಂದ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ಅದೇ ನಿಯಮಗಳ ನಿಯಮ 14 ನ್ನು ಸಡಿಲಿಸಿ, ಅರ್ಹತಾ ಮೊತ್ತವನ್ನು ಪಾವತಿಸುವ ಕುರಿತು ಅಗತ್ಯ ಪೂರಕ ಮಾಹಿತಿ / ಮೂಲ ದಾಖಲಾತಿಗಳೊಂದಿಗೆ ಪರಿಶೀಲಿಸಿ ಪಾವತಿಸುವ ಷರತ್ತಿಗೊಳಪಟ್ಟು ವಿಶೇಷ ಮಂಜೂರಾತಿ ನೀಡಿದೆ.

1. ಸರ್ಕಾರಿ ನೌಕರನು ಕರ್ನಾಟಕ ಆರ್ಥಿಕ ಸಂಹಿತೆ 1958ರ ಕಲಂ 146(A)(ii) ರ ಪ್ರಕಾರ ಸೂಕ್ತ ಕಾಲದಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿಯ ಕ್ಲೈಂ ಅನ್ನು ಮೂಲ ದಾಖಲೆಗಳೊಂದಿಗೆ ಸಲ್ಲಿಸಿದ್ದಾರೆಯೇ? ಇಲ್ಲದಿದ್ದಲ್ಲಿ ಕಾಲವಿಳಂಬ ಮನ್ನಾ ಮಾಡುವ ಬಗ್ಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಆದೇಶ ಹೊರಡಿಸಿದ ನಂತರವೇ ವೈದ್ಯಕೀಯ ವೆಚ್ಚ ಮರುಪಾವತಿಗೆ ಸಹಮತಿಸತಕ್ಕದ್ದು.

2. ಕ್ಲೈಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರ ಮೂಲದಿಂದ ಹಿಂಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿ ಕೊಳ್ಳತಕ್ಕದ್ದು.

3. ಸರ್ಕಾರಿ ನೌಕರರ ಪತ್ನಿ/ಪತಿಯು ರಾಜ್ಯ/ಕೇಂದ್ರ ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಸಂಸ್ಥೆಯ ನೌಕರರಾಗಿದ್ದಲ್ಲಿ ಅವರು ಈ ಬಗ್ಗೆ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಜಿ ಸಲ್ಲಿಸಿರುವುದಿಲ್ಲ ವೆಂಬುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.

4.ಯಾವುದೇ ಕಾರಣಕ್ಕೂ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಶಿಫಾರಸ್ಸು ಮಾಡಿರುವ ಮೊಬಲಗನ್ನು ಮೀರಿ ವೈದ್ಯಕೀಯ ವೆಚ್ಚ ಹಿಂಬರಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

22.4.2022

(ಡಿ. ಧನಂಜಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಜಲಸಂಪನ್ಮೂಲ ಇಲಾಖೆ (ಕಾಡಾ)

22-04-2022

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಎ & ಇ) (ಜಿ & ಎಸ್ಎಸ್ಎ) ಮತ್ತು (ಇ & ಆರ್ಎಸ್ಎ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು. (ಮೂಲ ವೈದ್ಯಕೀಯ ಬಿಲ್ಲುಗಳೊಂದಿಗೆ).
3. ಆಡಳಿತಾಧಿಕಾರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ ಕಲಬುರಗಿ
4. ಶ್ರೀ ಉದಯಕುಮಾರ ಪಟ್ಟಣ, ಅನುರೇಖಕರು, ಆಡಳಿತಾಧಿಕಾರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ನೀರಾವರಿ ಯೋಜನೆಗಳ ವಲಯ ಕಲಬುರಗಿ
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

I/2486306/2022

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಧೀಕ್ಷಕ ಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನೆ, ಯೋಜನಾ ವೃತ್ತ,ನಂ.02, ವಿ.ಜ.ನಿ.ನಿ., ಚಿತ್ರದುರ್ಗ ಇವರ ಉಪಯೋಗಕ್ಕಾಗಿ ಹೊಸ ವಾಹನ ಖರೀದಿಸುವ ಕುರಿತು.

* * * * *

**ಓದಲಾಗಿದೆ :**

1. ವ್ಯವಸ್ಥಾಪಕ ನಿರ್ದೇಶಕರು., ವಿಶ್ವೇಶ್ವರಯ್ಯ ಜಲ ನಿಗಮ ಇವರ ಪತ್ರ ಸಂ:ವಿಜನಿ/ ಮುಆಅ/ವಾಖಅ /2020/446 ದಿನಾಂಕ:14.10.2020.
2. ಮುಖ್ಯ ಆಡಳಿತಾಧಿಕಾರಿ, ವಿಶ್ವೇಶ್ವರಯ್ಯ ಜಲ ನಿಗಮ ಇವರ ಪತ್ರ ಸಂ:ವಿಜನಿ/ಮುಆಕ/ ಸಿ3/ ವಾಹನ /2021/185, ದಿನಾಂಕ:20/26.07.2021.
3. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 215 ಶಿವಾನಿ 2017, ದಿನಾಂಕ:02.04.2018.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿ ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ರವರು ಅಧೀಕ್ಷಕ ಇಂಜಿನಿಯರ್, ವಿ.ಜ.ನಿ.ನಿ., ಭದ್ರಾ ಮೇಲ್ದಂಡೆ ಯೋಜನಾ ವೃತ್ತ, ನಂ.02, ಚಿತ್ರದುರ್ಗ ಕಛೇರಿ ವ್ಯಾಪ್ತಿಯ ಕಾಮಗಾರಿಗಳ ಕಾಲ-ಕಾಲಕ್ಕೆ ನಡೆಸಬೇಕಾದ ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆ ಹಿತದೃಷ್ಠಿಯಿಂದ ಅತ್ಯವಶ್ಯವಾಗಿರುವ ಒಂದು ಹೊಸ ಹುಂಡೈ 1.5 ಎಂಪಿಐಐಎಸ್‌ಎಕ್ಸ್ ವಾಹನವನ್ನು ಖರೀದಿಸಲು ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ ಹಾಗೂ ಓದಲಾದ (2) ರಲ್ಲಿ ಮುಖ್ಯ ಆಡಳಿತಾಧಿಕಾರಿ, ವಿ.ಜ.ನಿ.ನಿ. ಇವರು ಹೊಸ ವಾಹನ ಖರೀದಿ ಸಂಬಂಧ ಅಂಶವಾರು ಸಮರ್ಥನೀಯ ಮಾಹಿತಿಯನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸುತ್ತಾ ಸದರಿ ವಾಹನ ಖರೀದಿಯನ್ನು ಲೆಕ್ಕ ಶೀರ್ಷಿಕೆ:4701 ರಡಿ ವಾರ್ಷಿಕ ಕಾರ್ಯಕ್ರಮ ಪಟ್ಟಿಯಲ್ಲಿ ಅಳವಡಿಸಿ, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗುವುದು ಎಂದು ವರದಿಸಿರುತ್ತಾರೆ.

2 . ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ:

**ಸರ್ಕಾರದ ಆದೇಶ ಸಂಖ್ಯೆ: ಜಸಂಇ 15 ಎನ್‌ಎಂಎಸ್ 2020,**
**ಬೆಂಗಳೂರು, ದಿನಾಂಕ:22.04.2022**

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತದ ಅಧೀನದಲ್ಲಿ ಬರುವ ಅಧೀಕ್ಷಕ ಇಂಜಿನಿಯರ್, ಭದ್ರಾ ಮೇಲ್ದಂಡೆ ಯೋಜನಾ ವೃತ್ತ, ನಂ.02, ಚಿತ್ರದುರ್ಗ, ಇವರ ಉಪಯೋಗಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶನುಸಾರ ರೂ.6.50 ಲಕ್ಷ (ರೂಪಾಯಿ ಆರು ಲಕ್ಷದ ಐವತ್ತು ಸಾವಿರಗಳು ಮಾತ್ರ) ಆರ್ಥಿಕ ಮಿತಿಯೊಳಗೆ (EX Show Room Rate) ಒಂದು ಹೊಸ ವಾಹನ ಖರೀದಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

2. ಸದರಿ ವಾಹನ ಖರೀದಿಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ:4701-132-ಬಂಡವಾಳ ವೆಚ್ಚಗಳಡಿ ಭರಿಸತಕ್ಕದ್ದು.

ಪುಟ-2 ಕ್ಕೆ

3. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 402 ಎಫ್.ಆರ್.ಸಿ. 2020(e) ದಿನಾಂಕ:24.03.2022 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

22/04/2022
( ಮನೋಹರ ವೈ. ರೊಟ್ಟೆ)
ವಿಶೇಷ ಕರ್ತವ್ಯಾಧಿಕಾರಿ
ಜಲಸಂಪನ್ಮೂಲ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿಗಳು (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ, ಬೆಂಗಳೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಆರ್ಥಿಕ ಕೋಶ) ಆರ್ಥಿಕ ಇಲಾಖೆ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು
6. ಜಂಟಿ ನಿರ್ದೇಶಕರು, ಬಿ.ಎನ್.ಎಂ.ಪಿ. ಕೆ.ಪಿ.ಸಿ.ಎಲ್. ಗ್ರೀನ್ ಬಿಲ್ಡಿಂಗ್, ಅರಮನೆ ರಸ್ತೆ, ಬೆಂಗಳೂರು.
7. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ.ಕೇಂದ್ರ, ಮುಖ್ಯ ಗೋಪುರ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ರವರ ಆಪ್ತ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ.
9. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು (ಕೃಭಾಜನಿ) ರವರ ಆಪ್ತ ಸಹಾಯಕರು, ಜಲಸಂಪನ್ಮೂಲ ಇಲಾಖೆ.
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

+++